1947 have been issued to the Deputy Commissioner, Mangalore to recover the amount as arrears of Land Revenue. ಎಂದು ಹೇಳಿದ್ದೀರಿ. ಈ ಸರ್ಟಿಫಿಕೇಟನ್ನು ಯಾವಾಗ ಕೊಟ್ಟಿದ್ದೀರಿ ಎಂದು ಹೇಳುತ್ತೀರಾ?

ಶ್ರೀ ಆರ್.ಎಸ್. ಪಾಟೀಲ್:– ಈ ಪ್ರಶ್ನೆಗೆ ಉತ್ತರ ಕೊಡುವಾಗ ಸ್ವಲ್ಪ ಇದರ ಇತಿಹಾಸ ಹೇಳಿದರೆ ತಪ್ಪಾಗಲಿಕ್ಕಿಲ್ಲ. ತಮಗೆ ಗೊತ್ತಾಗಿರುವಹಾಗೆ, ದಿನಾಂಕ ೨೨–೧೦–೧೯೬೯ ರಂದು ಆ ಫರ್ಮ್ ಮುಚ್ಚಿ ಹೋಯಿತು ಇದರಿಂದ ೨೬೧ ಜನ ಕಾರ್ಮಿಕರು ನಿರುದ್ಯೋಗಿಗಳಾದರು. ಆದ್ದರಿಂದ ಇನ್‌ಗ್ರೂಫ್ ಲೇಬರ್ ಕೋರ್ಟಿಗೆ ಹೋದರು. ದಿನಾಂಕ ೧೭–೪–೧೯೭೨ ರಂದು ಕೋರ್ಟಿನಿಂದ ಕಾಂಪನ್‌ಸೇಷನ್ ಕೊಡಬೇಕು. ಎಂದು ಆಯಿತು ಅದನ್ನು ಇಂಪ್ಲಿಮೆಂಟ್ ಮಾಡಲಿಲ್ಲ. ದಿನಾಂಕ ೯–೬–೧೯೭೨ ರಂದು ಸರ್ಕಾರಕ್ಕೆ ಮನವಿ ಮಾಡಿದರು. ಫರ್ಮ್‌ಗೆ ಇಂಪ್ಲಿಮೆಂಟ್ ಮಾಡಬೇಕು ಎಂದು ನಾವು ತಿಳಿಸಿದಾಗ, ಅವರಿಂದ ಏನೂ ರೆಸ್ಪಾನ್‌ಬರದೇ ಇದ್ದುದರಿಂದ ಡೆಪ್ಯುಟಿ ಕಮಿಷನರಿಗ ಕಳುಹಿಸಿದೆವು. ಇಮ್ಯೂವಬಲ್ ಪ್ರಾಪರ್ಟಿ ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ಗೆ ಹೈಪೊತೆಟಿಕೇಷನ್ ಆಗಿರುವುದರಿಂದ ವಸೂಲು ಮಾಡುವುದಕ್ಕೆ ಏನೂ ಇಲ್ಲ ಎಂದು ಅಲ್ಲಿಂದ ಬಂತು. ನಂತರ ಡೆಪ್ಯುಟಿ ಕಮಿಷನರಿಗೆ ಲ್ಯಾಂಡ್ ರೆವಿನ್ಯೂ ಅರಿಯರ್ಸ್ ರಿಕವರಿ ಮಾಡಬೇಕು ಎಂದು ಕಳುಹಿಸಿದೆವು. ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನವರು ಸಿವಿಲ್ ಕೋರ್ಟಿನಲ್ಲಿ ದಾವಾ ಹಾಕಿದ್ದಾರೆ ಎಂದರೂ ಆದಷ್ಟು ಬೇಗ ವಸೂಲು ಮಾಡಬೇಕು ಎಂದು ಹೇಳಿ ಅಲ್ಲಿನ ತಹಶೀಲ್ದಾರರಿಗೆ ಕ್ರಮ ತೆಗೆದುಕೊಳ್ಳುವ ಬಗ್ಗೆ ತಿಳಿಸಿದ್ದಾರೆ. ತಹಶೀಲ್ದಾರ್‌ರವರು ದಿನಾಂಕ ೨೮–೪–೧೯೭೭ ರಂದು ಡಿಫಾಲ್ಟರ್ಸ್ ಮೇಲೆ ನೋಟೀಸ್ ಕೊಟ್ಟು ಪ್ರಾಪರ್ಟಿ ಅಟ್ಯಾಚ್ ಮಾಡುವುದಕ್ಕೆ ಹೋಗಿ ಮ್ಯಾನೇಜಿಂಗ್ ಡೈರಕ್ಟರ್ ಪ್ರಾಪರ್ಟಿಯನ್ನು ಅಟ್ಯಾಚ್ ಮಾಡಿದ್ದಾರೆ. ಮ್ಯಾನೇಜಿಂಗ್ ಡೈರಕ್ಟರ್ ಅಬ್ಜಕ್ಷನ್ ಪಿಟಿಷನ್ ಫೈಲ್‌ಮಾಡಿದ್ದಾರೆ. ಆದಷ್ಟು ಬೇಗ ಕ್ರಮ ತೆಗೆದುಕೊಳ್ಳಬೇಕು ಎಂದು ಇನ್‌ಸ್ಟ್ರಕ್ಷನ ಕೊಟ್ಟಿದೆ.

ಅಧ್ಯಕ್ಷರು ಈಗ ಪ್ರಶ್ನೋತ್ತರಗಳು ಮುಗಿದಿವೆ.

Replies due to Questions and caliing attentim Notices

ಒಬ್ಬ ಸದಸ್ಯರು ; ತಮಗೆ ಒಂದು ಪ್ರಶ್ನೆ ಕೇಳಬೇಕು ಎಂದು ನನಗೆ ಇಚ್ಛೆ ಇದೆ, ತಾವು ಉತ್ತರ ಕೊಡಬೇಕು.

ಅಧ್ಯಕ್ಷರು.—ಈಗ ತಾವು ಕುಳಿತುಕೊಳ್ಳಿ.

ಒಬ್ಬ ಸದಸ್ಯರು.—ಸ್ಟಾಂಡ್ಡ್ ಕೊಶ್ಚನ್, ಕಾಲಿಂಗ್ ಅಟೆನ್‌ಷನ್ ಕೊಟ್ಟು ೬ ತಿಂಗಳಾಯಿತು ಶಾರ್ಟ್ ನೋಟಿಸ್ ಕೊಶ್ಚನ್ ಕೊಟ್ಟು ೨೦ ದಿವಸ ಆಯಿತು ಇನ್ನೂ ಉತ್ತರ ಬಂದಿಲ್ಲ.

ಅಧ್ಯಕ್ಷರು.—ಈ ಮನೆಯಲ್ಲಿ ಈ ಸಲ ೭೦೦ರ ಮೇಲೆ ಪ್ರಶ್ನೆಗಳಿಗೆ ಉತ್ತರಗಳನ್ನು ಒದಗಿಸಲಾಗಿದೆ ರಿಕಾರ್ಡ್‌ಬ್ರೇಕ್ ಆಗಿದೆ. ರೂಲ್ಸ್ ಪ್ರಕಾರ ದಿನಕ್ಕೆ ಒಂದು ಕಾಲಿಂಗ್ ಅಟೆನ್‌ಷನ್ ಹಾಕಬೇಕು ಎಂದು ಇರುವುದು. ನಾವು ಎರಡು ಕಾಲಿಂಗ್ ಅಟೆನ್‌ಷನ್ಸ್ ಹಾಕುತ್ತಿದ್ದೇವೆ. ಆದರೂ ಈ ರೀತಿ ಹೇಳಿದರೆ ಹೀಗೆ

ಶ್ರೀ ಬಿ.ವಿ. ಕಕ್ಕಿಲ್ಲಾಯ.—ಹರಿಜನರ ಮೇಲೆ ದಬ್ಬಾಳಿಕೆ ನಡೆಯುತ್ತಿದೆ. ಇದರ ಬಗ್ಗೆ ಸರ್ಕಾರದ ಗಮನ ಸೆಳೆಯುವುದಕೋಸ್ಕರ ಪ್ರಶ್ನೆ, ಕಾಲಿಂಗ್ ಅಟೆನ್‌ಷನ್‌ನ್ನು ನಾನು ಮತ್ತು ಅವರೂ ಕಳಿಸಿದ್ದು. ಅದು ಬಂದಿದ್ದರೆ ಅವರಿಗೆ ಸ್ವಲ್ಪ ರಕ್ಷಣೆ ಸಿಗುವ ಭರವಸೆ ಬರುತ್ತಿತ್ತು. ಅದಕೋಸ್ಕರವಾಗಿ ಅವರು ಹೇಳುತ್ತಿದ್ದಾರೆ.

ಅಧ್ಯಕ್ಷರು :೫೬ ದಿವಸ ಆಗಿದೆ, ಇಷ್ಟು ದಿವಸ ಹೇಳಲಿಲ್ಲ. ಈಗ ಸಭೆ ಮುಗಿಯುವ ದಿವಸ ಬಂದು ಹೇಳುತ್ತಿದ್ದಾರೆ ಪ್ರಶ್ನೋತ್ತರಗಳು ಮುಗಿದುವು ಎಂದು ಹೇಳಿದ್ದೇನೆ. ಮತ್ತೆ ಈಗ ರೂಲ್ಸ್‌ಗೆ ವಿರುದ್ಧವಾಗಿ ಮಾಡುವುದಕ್ಕೆ ಸಾಧ್ಯವಿಲ್ಲ.